ಈ) ಈ ಕಾಮಗಾರಿಯನ್ನು 03 ಹಂತದಲ್ಲಿ ನೆರವೇರಿಸಲು ಉದ್ದೇಶಿಸಲಾಗಿದ್ದು, ಮೊದಲನೇ ಮತ್ತು ಎರಡನೇ ಹಂತದ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಮೂರನೇ ಹಂತದ ಕಾಮಗಾರಿ ಪ್ರಗತಿಯಲ್ಲಿದ್ದು, ಆಗಸ್ಟ್ 2005 ರಲ್ಲಿ ಪೂರ್ಣಗೊಳ್ಳುವುದು.

ಇದುವರೆವಿಗೂ ಕಾಮಗಾರಿಗಳಿಗಾಗಿ ಖರ್ಚು ಮಾಡಿದ ಹಣ ರೂ. 203.67 ಲಕ್ಷಗಳು.

5379(5429) ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಕೆ.ಎ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು;

ಆ) ಪ್ರತಿ ವರ್ಷ ತಮ್ಮ ಆಸ್ತಿ ಪಾಸ್ತಿಗಳ ಬಗ್ಗೆ ವರದಿ ಸಲ್ಲಿಸದೇ ಇರುವ ಕೆ.ಎ.ಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು;

ಇ) ಆಸ್ತಿ ಪಾಸ್ತಿಗಳ ಬಗ್ಗೆ ಸಲ್ಲಿಸಿರುವ ವರದಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಆಸ್ತಿ ಪಾಸ್ತಿಗಳ ವರದಿಯಲ್ಲಿ ನಮೂದಿಸಿರುವುದಕ್ಕಿಂತ ಅಧಿಕ ಆಸ್ತಿಯನ್ನು ಕೆಲವು ಕೆ.ಎ.ಎಸ್ ಅಧಿಕಾರಿಗಳು ಹೊಂದಿರುವುದನ್ನು ಪತ್ತೆ ಹಚ್ಚಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) 358

ಆ) ಪ್ರತಿ ವರ್ಷ ಎಲ್ಲಾ ಕೆ.ಎ.ಎಸ್ ಅಧಿಕಾರಿಗಳು ಅವರ ಆಸ್ತಿ ಪಾಸ್ತಿಗಳ ಬಗ್ಗೆ ನಿಯಮಾನುಸಾರ ವರದಿ ಸಲ್ಲಿಸಬೇಕಾಗಿದ್ದು, ಅದರಂತೆ ಎಲ್ಲಾ ಕೆ.ಎ.ಎಸ್ ಅಧಿಕಾರಿಗಳು ಸಾಮಾನ್ಯವಾಗಿ ತಮ್ಮ ಆಸ್ತಿ ಪಾಸ್ತಿಗಳ ವಿವರಗಳನ್ನು ಸಲ್ಲಿಸುತ್ತಿದ್ದಾರೆ. 2002–03 ಮತ್ತು 2003–04ನೇ ಸಾಲಿಗೆ ಈ ಆಸ್ತಿ–ಹೊಣೆಗಾರಿಕೆ ವಿವರಗಳನ್ನು ನೀಡಲು ವಿಳಂಬ ಮಾಡಿದ 72 ಅಧಿಕಾರಿಗಳಿಂದ ವಿವರಗಳನ್ನು ಪಡೆಯಲು ಕ್ರಮಕೈಗೊಳ್ಳಲಾಗಿದೆ.

ಇ) ಪ್ರತಿ ವರ್ಷ ಕೆ.ಎ.ಎಸ್. ಅಧಿಕಾರಿಗಳು ಸಲ್ಲಿಸಿದ ಆಸ್ತಿ–ಹೊಣೆಗಾರಿಕೆ ಪಟ್ಟಿಯನ್ನು ಪರಾಮರ್ಶಿಸಿ ಅವರ ವೈಯಕ್ತಿಕ ಕಡತಗಳಲ್ಲಿ ಟಿಪ್ಪಣಿ ಮಾಡಿಕೊಳ್ಳಲಾಗುತ್ತಿದೆ.

ಈ) ಆಸ್ತಿ–ಹೊಣೆಗಾರಿಕೆಗಳಲ್ಲಿ ನಮೂದಿಸಿರುವುದಕ್ಕಿಂತ ಅಧಿಕ ಆಸ್ತಿಯನ್ನು ಹೊಂದಿರುವ ಕುರಿತು ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಾರೆ. ಅವರ ವರದಿಗಳನ್ವಯ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

5380(6044) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವೀರಪ್ಪನ್ ಪ್ರಕರಣದಲ್ಲಿ ತಮ್ಮ ಜೀವನ ಹಂಗು ತೊರೆದು ಸಾಹಸ ಪ್ರದರ್ಶಿಸಿ ಸರ್ಕಾರಕ್ಕೆ ಒಳ್ಳೆಯ ಹೆಸರು ತಂದ ಎಸ್.ಟಿ.ಎಫ್. ಸಿಬ್ಬಂದಿಗಳಿಗೆ ಸರ್ಕಾರ ಘೋಷಿಸಿದ ಹಣವನ್ನು ಪಾವತಿ ಮಾಡಲಾಗಿದೆಯೇ?

ಆ) ಹಾಗಿಲ್ಲವಾದಲ್ಲಿ, ವಿಳಂಬಕ್ಕೆ ಕಾರಣಗಳೇನು? ಹಾಗೂ ಯಾವಾಗ ಪಾವತಿಸಲಾಗುವುದು?

ಇ) ಸದರಿ ಹಣವನ್ನು ಸರ್ಕಾರ ಪಾವತಿಸಲು ಕಾಲನಿಗಧಿಯನ್ನೇನಾದರೂ ನಿಗದಿ ಪಡಿಸಿದೆಯೇ?